1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,
ಚಿಕ್ಕಮಗಳೂರು

<u>ಸ್ಪೆಷಲ್ ಮೊಕದ್ದಮೆ ಸಂಖ್ಯೆಃ 83/2018</u>

| | | | |
|---|---|---|---|
| ಸಾಕ್ಷಿದಾರರ ಹೆಸರು | ಶಿವಾನಂದ | ಪಿ.ಡಬ್ಲ್ಯೂ. | 06 |
| ತಂದೆಯ ಹೆಸರು | ಕರಿಯ | ಸಿ.ಡಬ್ಲ್ಯೂ. | 05 |
| ವಯಸ್ಸು | 32 ವರ್ಷ | | |
| ಉದ್ಯೋಗ | ಕೂಲಿ | | |
| ವಾಸಸ್ಥಳ | ಉಜಿನಿ | | |

ದಿಃ 16.01.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

1. ಈ ಪ್ರಕರಣದ ಆರೋಪಿಗಳು ಗೊತ್ತು. ಈ ದಿನ 3 ನೇ ಆರೋಪಿ ಗೈರು ಹಾಜರಿದ್ದು ಅವರ ಗುರುತಿನ ಸಂಬಂಧ ತಮ್ಮದೇನು ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ವಿನಾಯತಿ ಅರ್ಜಿಯಲ್ಲಿ ನಮೂದಿಸಿರುತ್ತಾರೆ. ಚಾಸಾ.1 ನನ್ನ ಅಣ್ಣ. ಚಾಸಾ.2 ಮತ್ತು 3 ನನ್ನ ಸಂಬಂಧಿಕರು. ಚಾಸಾ.6 ನನ್ನ ತಂದೆ. ಚಾಸಾ.7 ನನ್ನ ತಾಯಿ. ಉಳಿಕೆ ಸಾಕ್ಷಿದಾರರು ಗೊತ್ತು.

2. ದಿಃ 08.01.2018 ರಂದು ಸಂಜೆ 4.30 ರಿಂದ 5.00 ರ ಸುಮಾರಿಗೆ ಚಾಸಾ.2 ಮತ್ತು 3 ರವರು ನನ್ನ ಅಣ್ಣನಾದ ಚಾಸಾ.1 ರವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದರು. ಆಗ ಚಾಸಾ.1 ರವರ ಮೈಮೇಲೆ ಶರಟು ಇರಲಿಲ್ಲ ಆದರೆ ಪ್ಯಾಂಟು ಇತ್ತು. ಆ ಬಗ್ಗೆ ನಾನು ಮತ್ತು ನನ್ನ ತಂದೆ ತಾಯಿ ಚಾಸಾ.1 ರವರನ್ನು ಏನಾಯಿತು ಎಂದು ಕೇಳಿದಾಗ, ಬಾಳೆಹೊನ್ನೂರಿನಿಂದ ಕೆಎ-18/ಎ-823 ಸಹಕಾರ ಸಾರಿಗೆ ಬಸ್ಸಿನಲ್ಲಿ ಊರಿಗೆ ಬರುವಾಗ, ಸಂಜೆ 4.30 ಕ್ಕೆ ಖಾಂಡ್ಯ ಆರ್ಚ ಹತ್ತಿರ ಬನ್ನಿಮಹಾಕಾಳಿ ದೇವಸ್ಥಾನದ ಹತ್ತಿರ ಬೈಕಿನಲ್ಲಿ ಬಂದು

ಬಸ್ಸನ್ನು ಅಡ್ಡಹಾಕಿದರು. ನಂತರ ಬಸ್ಸನ್ನು ಫಾಲೋ ಮಾಡಿಕೊಂಡು ಬಂದು ಉಜಿನಿ ಬಸ್ಸು ನಿಲ್ದಾಣದ ಬಳಿ ಚಾಸಾ.1 ರವರನ್ನು ಬಸ್ಸಿನಿಂದ ಎಳೆದು ಹಾಕಿ ಶರಟನ್ನು ಹರಿದು ಹೊಡೆದುಹಾಕಿರುತ್ತಾರೆ. ನಂತರ ಅದೇ ಬಸ್ಸಿನಲ್ಲಿ ಚಾಸಾ.2 ಮತ್ತು 3 ರವರು ಚಾಸಾ.1 ರವರನ್ನು ಕರೆದುಕೊಂಡು ಬಂದರು.

3. ಅದೇ ದಿನ ರಾತ್ರಿ 8.00 ಗಂಟೆಗೆ ಚಾಸಾ.1 ರವರಿಗೆ ನೋವು ಜಾಸ್ತಿಯಾದ ಕಾರಣ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ನಾನು ಮತ್ತು ಚಾಸಾ.7 ರವರು ಆಟೋದಲ್ಲಿ ಕರೆದುಕೊಂಡು ಬಂದೆವು. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ.

(ಈ ಹಂತದಲ್ಲಿ ತನ್ನ ಹೇಳಿಕೆಗೆ ಭಾಗಶಃ ವಿರುದ್ಧವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

4. ದಿಃ 08.01.2018 ರಂದು ಆರೋಪಿತರು ಬೈಕನ್ನು ರಸ್ತೆಗೆ ಅಡ್ಡಲಾಗಿ ನಿಲ್ಲಿಸಿಕೊಂಡಿದ್ದು, ಬಸ್ ಡ್ರೈವರ್ ಹಾರ್ನ ಮಾಡಿದರೂ ಸಹ ಸೈಡ್ ಕೊಡಲಿಲ್ಲ ಎಂದರೆ ಸರಿ. ಆಗ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಚಾಸಾ.1 ರವರು ಆರೋಪಿತರಿಗೆ ಸೈಡ್ ಕೊಡುವಂತೆ ಕೇಳಿದರು ಎಂದರೆ ಸರಿ. ಆಗ ಆರೋಪಿತರು ಚಾಸಾ.1 ರವರಿಗೆ ಸೂಳೆ ಮಗನೇ, ನಮಗೆ ಸೈಡ್ ಕೊಡು ಎಂದು ಹೇಳಲಿಕ್ಕೆ ನೀನು ಯಾರು ಎಂದು ಬಾಯಿಗೆ ಬಂದಂತೆ ಬೈದ್ದುರು ಎಂದರೆ ಸರಿ. ನಂತರ ಬಸ್ಸು ಉಜ್ಜನಿ ಬಸ್ ನಿಲ್ದಾಣದ ಹತ್ತಿರ ಬಂದಾಗ ಆರೋಪಿತರು ಬಂದು ಬಸ್ಸಿಗೆ ಅಡ್ಡಲಾಗಿ ಬೈಕನ್ನು ನಿಲ್ಲಿಸಿ, ಬಸ್ಸಿನ ಡೋರ್

ಬಳಿ ನಿಂತಿದ್ದ ಚಾಸಾ.1 ರವರನ್ನು ಬಸ್ಸಿನಿಂದ ಕೆಳಗೆ ಎಳೆದುಕೊಂಡು ಹೊಲೆಯ ಸೂಳೇಮಗನೇ, ಜಾತಿನಾಡ, ರಸ್ತೆ ನಿನ್ನ ಅಪ್ಪನಧ ರಸ್ತೆ ಬಿಡು ಎಂದು ನಮಗೆ ಹೇಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಜಾತಿನಿಂದನೆ ಮಾಡಿ ಬೈಯ್ದು, ಕೈಯಿಂದ ಮೈಕೈಗೆ ಹೊಡೆದರು ಎಂದರೆ ಸರಿ. ಅಲ್ಲದೆ ಚಾಸಾ.1 ರವರ ಶರಟನ್ನು ಹರಿದು ಬಿಸಾಡಿ, ರಸ್ತೆ ಬದಿಯಲ್ಲಿ ಚಾಸಾ.1 ರವರನ್ನು ನೆಲಕ್ಕೆ ಹಾಕಿ ಚಪ್ಪಲಿ ಕಾಲಿನಲ್ಲಿ ತುಳಿದು ಜಾತಿ ನಿಂದನೆ ಮಾಡಿ, ನಮ್ಮ ತಂಟೆಗೆ ಬಂದರೆ ನಿನ್ನನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು ಎಂದರೆ ಸರಿ. ಈ ಬಗ್ಗೆ ನಾನು ಪೊಲೀಸರಿಗೆ ದಿಃ 10.01.2018 ರಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ.

(ಈ ಹಂತದಲ್ಲಿ ಸಾಕ್ಷಿಯ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

(ಬಿ.ಪುಷ್ಪಾಂಜಲಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

<u>ದಿಃ 20.02.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

1. ಆರೋಪಿತರು ಹಾಗೂ ಚಾಸಾ. 1 ರವರ ನಡುವೆ ನಡೆಯುತು ಎನ್ನಲಾದ ಘಟನೆಯನ್ನು ನಾನು ಖುದ್ದಾಗಿ ನೋಡಿಲ್ಲ. ನಾನು ಚಾಸಾ. 1 ರವನ್ನಲು ನೋಡಿದಾಗ ಆತನ ಮೇಲೆ ಶರ್ಟು ಇಲ್ಲದನ್ನು ನೋಡಿ

ಹೊರತು ಪಡಿಸಿ ಮೈಯಲ್ಲಿ ಗಾಯದ ಗುರುತು ಇದ್ದ ಬಗ್ಗೆ ನಾನು ನೋಡಿಲ್ಲ. ನಮ್ಮುರಿನ ಬಸ್ಸಿನಲ್ಲಿ ಊರಿನವರು ಹಾಗೂ ಪರಿಚಯಸ್ಥರು ಜಾಸ್ತಿ ಇರುತ್ತಾರೆ ಎಂದರೆ ಸರಿ.

2. ಗಲಾಟೆ ಆದ ದಿನ ನಾನು ಪೋಲೀಸ್ ಠಾಣೆಗೆ ಹೋಗಿಲ್ಲ. ಬೇರೆ ದಿನಗಳಲ್ಲಿ ಪೋಲೀಸರು ನೋಟೀಸು ಕೊಟ್ಟು ಕರೆಸಿ ವಿಚಾರಣೆ ಮಾಡಿಲ್ಲ. ಈ ಕೇಸಿನಲ್ಲಿ ಸಾಕ್ಷಿ ಹೇಳಿದ ದಿನವೇ ಮೊದಲ ಬಾರಿಗೆ ಘಟನೆ ಹೇಳಿರುವುದು ಬಿಟ್ಟ ಬೇರೆ ಯಾರ ಬಳಿ ಹೇಳಿಲ್ಲ.

3. ದಿಃ 08.01.2018 ರಂದು ಸಂಜೆ 4.30 ರಿಂದ 5.00 ರ ಸುಮಾರಿಗೆ ಚಾಸಾ.2 ಮತ್ತು 3 ರವರು ನನ್ನ ಅಣ್ಣನಾದ ಚಾಸಾ.1 ರವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆಗ ಚಾಸಾ.1 ರವರ ಮೈಮೇಲೆ ಶರಟು ಇರಲಿಲ್ಲ ಆದರೆ ಪ್ಯಾಂಟು ಇತ್ತು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಮತ್ತು ನನ್ನ ತಂದೆ ತಾಯಿ ಚಾಸಾ.1 ರವರನ್ನು ಏನಾಯಿತು ಎಂದು ಕೇಳಿದಾಗ, ಬಾಳೆಹೊನ್ನೂರಿನಿಂದ ಕೆಎ-18/ಎ-823 ಸಹಕಾರ ಸಾರಿಗೆ ಬಸ್ಸಿನಲ್ಲಿ ಊರಿಗೆ ಬರುವಾಗ, ಸಂಜೆ 4.30 ಕ್ಕೆ ಖಾಂಡ್ಯ ಆರ್ಚ ಹತ್ತಿರ ಬನ್ನಿಮಹಾಕಾಳಿ ದೇವಸ್ಥಾನದ ಹತ್ತಿರ ಬೈಕಿನಲ್ಲಿ ಬಂದು ಬಸ್ಸನ್ನು ಅಡ್ಡಹಾಕಿದರು

ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಬಸ್ಸನ್ನು ಫಾಲೋ ಮಾಡಿಕೊಂಡು ಬಂದು ಉಜಿನಿ ಬಸ್ಸು ನಿಲ್ದಾಣದ ಬಳಿ ಚಾಸಾ.1 ರವರನ್ನು ಬಸ್ಸಿನಿಂದ ಎಳೆದು ಹಾಕಿ ಶರಟನ್ನು ಹರಿದು ಹೊಡೆದುಹಾಕಿರುತ್ತಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಅದೇ ಬಸ್ಸಿನಲ್ಲಿ ಚಾಸಾ.2 ಮತ್ತು 3 ರವರು ಚಾಸಾ.1 ರವರನ್ನು ಕರೆದುಕೊಂಡು ಬಂದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

4. ಅದೇ ದಿನ ರಾತ್ರಿ 8.00 ಗಂಟೆಗೆ ಚಾಸಾ.1 ರವರಿಗೆ ನೋವು ಜಾಸ್ತಿಯಾದ ಕಾರಣ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ನಾನು ಮತ್ತು ಚಾಸಾ.7 ರವರು ಆಟೋದಲ್ಲಿ ಕರೆದುಕೊಂಡು ಬಂದೆವು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

5. ದಿಃ 08.01.2018 ರಂದು ಆರೋಪಿತರು ಬೈಕನ್ನು ರಸ್ತೆಗೆ ಅಡ್ಡಲಾಗಿ ನಿಲ್ಲಿಸಿಕೊಂಡಿದ್ದು, ಬಸ್ ಡ್ರೈವರ್ ಹಾರ್ನ ಮಾಡಿದರೂ ಸಹ ಸೈಡ್ ಕೊಡಲಿಲ್ಲ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆಗ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಚಾಸಾ.1 ರವರು ಆರೋಪಿತರಿಗೆ ಸೈಡ್ ಕೊಡುವಂತೆ ಕೇಳಿದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆಗ ಆರೋಪಿತರು ಚಾಸಾ.1 ರವರಿಗೆ ಸೂಳೆ ಮಗನೇ, ನಮಗೆ ಸೈಡ್ ಕೊಡು ಎಂದು ಹೇಳಲಿಕ್ಕೆ ನೀನು ಯಾರು ಎಂದು ಬಾಯಿಗೆ ಬಂದಂತೆ ಬೈಯ್ದುರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ಬಸ್ಸು ಉಜ್ಜನಿ ಬಸ್ ನಿಲ್ದಾಣದ ಹತ್ತಿರ ಬಂದಾಗ ಆರೋಪಿತರು ಬಂದು ಬಸ್ಸಿಗೆ ಅಡ್ಡಲಾಗಿ ಬೈಕನ್ನು ನಿಲ್ಲಿಸಿ, ಬಸ್ಸಿನ ಡೋರ್ ಬಳಿ ನಿಂತಿದ್ದ ಚಾಸಾ.1 ರವರನ್ನು ಬಸ್ಸಿನಿಂದ ಕೆಳಗೆ ಎಳೆದುಕೊಂಡು ಹೊಲೆಯ ಸೂಳೇಮಗನೇ, ಜಾತಿನಾಡ, ರಸ್ತೆ ನಿನ್ನ ಅಪ್ಪನಧ ರಸ್ತೆ ಬಿಡು ಎಂದು ನಮಗೆ ಹೇಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಜಾತಿನಿಂದನೆ ಮಾಡಿ ಬೈಯ್ದು, ಕೈಯಿಂದ ಮೈಕೈಗೆ ಹೊಡೆದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಅಲ್ಲದೆ ಚಾಸಾ.1 ರವರ ಶರಟನ್ನು ಹರಿದು ಬಿಸಾಡಿ, ರಸ್ತೆ ಬದಿಯಲ್ಲಿ

ಚಾಸಾ.1 ರವರನ್ನು ನೆಲಕ್ಕೆ ಹಾಕಿ ಚಪ್ಪಲಿ ಕಾಲಿನಲ್ಲಿ ತುಳಿದು ಜಾತಿ ನಿಂದನೆ ಮಾಡಿ, ನಮ್ಮ ತಂಟೆಗೆ ಬಂದರೆ ನಿನ್ನನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-
(ಬಿ.ಪುಷ್ಪಾಂಜಲಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.